429 ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್ : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಜಮಖಂಡಿ ತಾಲ್ಲೂಕಿನ ಚಿಕ್ಕಲಕಿ ಗ್ರಾಮದ ರೈತರ ವ್ಯವಸಾಯ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ನಡೆದಿರುವ ಅವ್ಯವಹಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ;

ಇ) ಸಮಿತಿಯ ಸದಸ್ಯರು ಸಾಲ ಪಡೆಯದಿದ್ದರೂ ಅವರ ಹೆಸರಿನಲ್ಲಿ ಸಾಲ ಇದೆ ಎಂದು ಕಾರ್ಯದರ್ಶಿಯವರು ಸದಸ್ಯರಿಗೆ ಹಣ ತುಂಬಲು ನೋಟೀಸ್ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಲಕ್ಷ್ಮಣ ಸ. ಸವದಿ (ಸಹಕಾರ ಸಚಿವರು):

ಅ) ಸಹಕಾರ ಇಲಾಖೆಯ ಗಮನಕ್ಕೆ ಬಂದಿರುತ್ತದೆ.

ಆ) ದೂರರ್ಜಿಯಲ್ಲಿನ ಅಂಶಗಳ ಕುರಿತು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 64 ರಡಿಯಲ್ಲಿ ವಿಚಾರಣೆ ಜರುಗಿಸಲು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಜಮಖಂಡಿ ಇವರು ದಿನಾಂಕ 9.6.2009ರಂದು ವಿಚಾರಣೆಗೆ ಆದೇಶಿಸಿದ್ದು ಮಾರಾಟಾಧಿಕಾರಿ, ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಚೇರಿ, ಜಮಖಂಡಿ ಇವರನ್ನು ವಿಚಾರಣಾಧಿಕಾರಿಯೆಂದು ನೇಮಿಸಿರುತ್ತಾರೆ. ಆ ಪ್ರಕಾರ ವಿಚಾರಣಾಧಿಕಾರಿಗಳು ವಿಚಾರಣೆ ಪ್ರಾರಂಭಿಸಿದ್ದು ವಿಚಾರಣೆ ಪ್ರಗತಿಯಲ್ಲಿರುತ್ತದೆ.

ಇ) ವಿಚಾರಣಾಧಿಕಾರಿಗಳು ಎಲ್ಲ ಸದಸ್ಯರಿಗೆ ನೋಟೀಸ್ ನೀಡಿ ದಿನಾಂಕ 6.7.2009 ಹಾಗೂ ದಿನಾಂಕ 10.7.2009 ರಂದು ಹಾಜರಾಗಿ ಸದಸ್ಯರ ತಮ್ಮ ಸಾಲ ಬಾಕಿ ಮತ್ತು ಷೇರು ಹಣದ ಕುರಿತು ಖಚಿತಪಡಿಸಿಕೊಂಡು ಏನಾದರೂ ವ್ಯತ್ಯಾಸವಿದ್ದಲ್ಲಿ ತಕರಾರು ಸಲ್ಲಿಸಲು

ತಿಳಿಸಿರುತ್ತಾರೆ. ಸದಸ್ಯರಿಂದ ಆಕ್ಷೇಪಣೆಗಳು ಸ್ವೀಕೃತವಾದ ನಂತರ ಮಾಹಿತಿಯನ್ನು ಖಚಿತಪಡಿಸಿಕೊಂಡು ವಿಚಾರಣಾಧಿಕಾರಿಯವರು ವರದಿಯನ್ನು ಅಂತಿಮಗೊಳಿಸುತ್ತಾರೆ.

ಈ) ವಿಚಾರಣೆ ವರದಿಯನ್ವಯ ಇಲಾಖಾಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳುತ್ತಾರೆ.

430 ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್ (ಜಮಖಂಡಿ): ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಕಳೆದ ಮೂರು ವರ್ಷಗಳಿಂದ ಜಮಖಂಡಿ ಕ್ಷೇತ್ರದಲ್ಲಿರುವ ಸಕ್ಕರೆ ಕಾರ್ಖಾನೆಗಳಿಂದ ವಸೂಲಾದ ಸೆಸ್ ಹಣ ಎಷ್ಟು;

ಆ) ಈ ಹಣದಲ್ಲಿ ಯಾವ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ?

ಶ್ರೀ ಶಿವರಾಜ್ ಎಸ್. ತಂಗಡಗಿ (ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು):

ಅ) ಜಮಖಂಡಿ ಕ್ಷೇತ್ರದಲ್ಲಿ ಒಟ್ಟು 2 ಸಕ್ಕರೆ ಕಾರ್ಖಾನೆಗಳಿಂದ ಆಯುಕ್ತರು, ವಾಣಿಜ್ಯ ತೆರಿಗೆ ಇಲಾಖೆಯವರಿಂದ ಒದಗಿಸಲಾದ ವಿವರಗಳಂತೆ ಕಳೆದ ಮೂರು ವರ್ಷಗಳಲ್ಲಿ ಒಟ್ಟು ರೂ. 245.15 ಲಕ್ಷಗಳ ಸೆಸ್ ವಸೂಲಾಗಿದ್ದು, ವಿವರಗಳು ಈ ಕೆಳಕಂಡಂತಿವೆ.